# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 329 |
| ಉತ್ತರಿಸಬೇಕಾದ ದಿನಾಂಕ | : | 12.07.2018 |
| ಸದಸ್ಯರ ಹೆಸರು | : | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ಅನುದಾನ ಸಹಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳು ಎಷ್ಟು; (ವಿವರವಾದ ಮಾಹಿತಿ ನೀಡುವುದು). | (ಕೆಳಗಿನ ಕೋಷ್ಟಕ ನೋಡಿ) |
| ಆ) | ಶ್ರೀ ಶ್ರೀನಿವಾಸ ಪ್ರೌಢಶಾಲೆ ಎಸ್. ಕೊಡಿಗೇಹಳ್ಳಿ ಗ್ರಾಮ, ಗುಬ್ಬಿ ತಾಲ್ಲೂಕು, ಇದು ಅನುದಾನ ಸಹಿತ ಶಾಲೆಯೇ; ಹಾಗಾದರೆ ಯಾವ ದಿನಾಂಕದಂದು ಅನುದಾನಕ್ಕೆ ಒಳಪಟ್ಟಿತು; (ವಿವರವಾದ ಮಾಹಿತಿ ನೀಡುವುದು). | ಜಿಲ್ಲಾ ಪಂಚಾಯತ್, ತುಮಕೂರು, ಇವರ ಜ್ಞಾಪನ ಸಂಖ್ಯೆ : ಜಿ.ಪ.ಆಡಳಿತ(4) ಸಿಬ್ಬಂದಿ 267/1990-91, ದಿನಾಂಕ : 25/01/1991ರಲ್ಲಿ ಶ್ರೀ ಶ್ರೀನಿವಾಸ ಪ್ರೌಢಶಾಲೆ ಎಸ್. ಕೊಡಿಗೇಹಳ್ಳಿ ಗ್ರಾಮ, ಗುಬ್ಬಿ ತಾಲ್ಲೂಕು, ಶಾಲೆಯನ್ನು ಅನುದಾನಕ್ಕೆ ಒಳಪಡಿಸಲಾಗಿದೆ. |
| ಇ) | ಈ ಶಾಲೆಯ ಕಳೆದ 10 ವರ್ಷಗಳ ಎಸ್.ಎಸ್.ಎಲ್.ಸಿ. ಫಲಿತಾಂಶದ ವಿವರ ನೀಡುವುದು; | (ಕೆಳಗಿನ ಕೋಷ್ಟಕ ನೋಡಿ) |
| ಈ) | ಸದರಿ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳು ಯಾವು ಯಾವುವು; ಇವುಗಳನ್ನು ಯಾವ ಕಾಲಮಿತಿಯೊಳಗೆ ಯಾರು ಭರ್ತಿ ಮಾಡಬೇಕಾಗುತ್ತದೆ; (ವಿವರವಾದ ಮಾಹಿತಿ ನೀಡುವುದು) | ಸದರಿ ಶಾಲೆಯಲ್ಲಿ ಹಿಂದಿ, ಆಂಗ್ಲ ಮತ್ತು ಸಮಾಜ ವಿಜ್ಞಾನಗಳ ತಲಾ ಒಂದರಂತೆ ಒಟ್ಟು 03 ಹುದ್ದೆಗಳು ಖಾಲಿ ಇರುತ್ತವೆ.<br><br>ದಿನಾಂಕ:31.12.2014ರವರೆಗೆ ನಿವೃತ್ತಿ, ಮರಣ, ರಾಜೀನಾಮೆ ಇನ್ನಿತರೆ ಕಾರಣಗಳಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಹುದ್ದೆಗಳ ಭರ್ತಿಗೆ ಆಯಾ ಆಯುಕ್ತರಿಗೆ ಅನುಮತಿ ನೀಡಲಾಗಿದೆ.<br><br>ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಅನುಮತಿಯೊಂದಿಗೆ ಭರ್ತಿ ಮಾಡಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. |

ಅ) ಉತ್ತರ:

| ತಾಲ್ಲೂಕು | ಅನುದಾನಿತ ಪ್ರೌಢಶಾಲೆಗಳು | ಅನುದಾನರಹಿತ ಪ್ರೌಢಶಾಲೆಗಳು |
|---|---|---|
| ಗುಬ್ಬಿ | 30 | 10 |

ಇ) ಉತ್ತರ:

| ಶೈಕ್ಷಣಿಕ ವರ್ಷ | ಪರೀಕ್ಷೆಗೆ ಹಾಜರಾದ ಮಕ್ಕಳ ಸಂಖ್ಯೆ | ತೇರ್ಗಡೆ ಹೊಂದಿದ ಮಕ್ಕಳ ಸಂಖ್ಯೆ | ಶಾಲಾ ಎಸ್.ಎಸ್.ಎಲ್.ಸಿ., ಫಲಿತಾಂಶ |
|---|---|---|---|
| 2008-09 | 75 | 55 | 73.33% |
| 2009-10 | 70 | 66 | 94.28% |
| 2010-11 | 106 | 100 | 94.33% |
| 2011-12 | 69 | 69 | 100% |
| 2012-13 | 76 | 74 | 97.36% |
| 2013-14 | 77 | 75 | 97.40% |
| 2014-15 | 89 | 86 | 96.62% |
| 2015-16 | 86 | 75 | 87.20% |
| 2016-17 | 75 | 67 | 89.33% |
| 2017-18 | 71 | 71 | 100% |

| | | |
|---|---|---|
| ಉ) | ಈ ಶಾಲೆಯಲ್ಲಿ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಸರ್ಕಾರ ಈ ಶಾಲೆಗೆ ಖಾಲಿಯಿರುವ ಶಿಕ್ಷಕರನ್ನು ಯಾವ ದಿನಾಂಕದೊಳಗೆ ನಿಯೋಜಿಸಲಾಗುವುದು; | ಹೌದು<br>ಜಿಲ್ಲಾ ಹಂತದಲ್ಲಿ ಅನುದಾನಿತ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿದ್ದು, ಈ ಬಗ್ಗೆ ಕ್ರಮವಹಿಸಲಾಗುತ್ತಿದೆ. |
| ಊ) | ಈ ಶಾಲೆಯ ಆಡಳಿತ ಮಂಡಳಿಯ ವಿರುದ್ಧ ದಾಖಲಾಗಿರುವ ದೂರುಗಳೇನು; ಇದರ ಸಂಬಂಧ ಸರ್ಕಾರದ ನಿಲುವೇನು; ಈ ಪ್ರಕರಣವನ್ನು ಯಾವ ಕಾಲಮಿತಿಯೊಳಗೆ ಸರ್ಕಾರವು ಮುಕ್ತಾಯಗೊಳಿಸುವುದು; | ಶಾಲಾ ಆಡಳಿತ ಮಂಡಳಿಯವರು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಅನುದಾನ ಪಡೆದಿರುವ ದೂರು ಇರುತ್ತದೆ. ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ : ಇಡಿ 125 ಪಿಎಂಸಿ 2008, ದಿನಾಂಕ : 11/02/2009ರಲ್ಲಿ ಸದರಿ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ವಿರುದ್ಧ ಕ್ರಿಮಿನಲ್ ದಾವೆ ದಾಖಲು ಮಾಡಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರಿಗೆ ನಿರ್ದೇಶನ ನೀಡಲಾಗಿದ್ದು, ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |
| ಋ) | ಈ ಶಾಲೆಗೆ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸಲು ಇಚ್ಛಿಸಿದೆಯೇ? | ಇಲ್ಲ. |

(ಸಂಖ್ಯೆ : ಇಡಿ 382 ಎಸ್ಇಎಸ್ 2018)

(ಎಸ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.